

ನಿರ್ಮಾಪಕ ಹರಿ ಖೋಡೆ

# ಕನ್ನಡ ಸಿನಿಮಾದ ಆ–ಭರಣ 'ಅಲ್ಲಮ'

ಕನ್ನಡದ ವಿಶಿಷ್ಟ ಕವಿ ಕೆ.ಎಸ್. ನರಸಿಂಹಸ್ವಾಮಿ ಅವರ 'ಮೈಸೂರ ಮಲ್ಲಿಗೆ' ಗೀತೆಗಳನ್ನು ಆಧರಿಸಿ ಚಿತ್ರಕಥೆ ರೂಪಿಸಿ, ಸಿನಿಮಾ ನಿರ್ದೇಶಿಸುವ ಮೂಲಕ ಭಾರತೀಯ ಚಿತ್ರರಂಗದಲ್ಲೇ ಹೊಸ ಬಗೆಯ ಚಿತ್ರವೊಂದನ್ನು ರೂಪಿಸಿದ ಕೀರ್ತಿ ನಿರ್ದೇಶಕ ಟಿ.ಎಸ್. ನಾಗಾಭರಣ ಅವರದು. ಇದೇ ಭರಣ, ಜನರ ನಡುವಣ ಅನುಭಾವಿ ಕವಿ ಶಿಶುನಾಳ ಶರೀಫರ ಕುರಿತು ಸಿನಿಮಾ ಮಾಡಿ ಸೈ ಎನ್ನಿಸಿಕೊಂಡಿದ್ದರು. ಈ ಹೆದ್ದಾರಿಯ ಅವರ ಮುಂದಿನ ನಿಲ್ದಾಣ 'ಅಲ್ಲಮ'.

ಶರೀಫರಂತೆ ಅಲ್ಲಮ ಜನರಿಗೆ ದಕ್ಕಿದ ಕವಿಯಲ್ಲ. 'ಮೈಸೂರ ಮಲ್ಲಿಗೆ'ಯಂತೆ ರಮ್ಯ ಕನಸುಗಳೂ ಅಲ್ಲಮನ ವಚನಗಳಲ್ಲಿಲ್ಲ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಒಂದು ಬೆಡಗಿನಂತೆ ಭಿನ್ನವಾಗಿ ನಿಲ್ಲುವ ಅಲ್ಲಮನ ಬದುಕು–ಸಾಹಿತ್ಯದ್ದು ಅತ್ಯಂತ ಸಂಕೀರ್ಣ ಸ್ವರೂಪ. ಕನ್ನಡದ ಸೊಗಡಿನ ಈ ವಿಶಿಷ್ಟ ರೂಪಕವನ್ನು ಸಿನಿಮಾಕ್ಕೆ ಒಗ್ಗಿಸುವ ಪ್ರಯತ್ನ ನಾಗಾಭರಣ ಅವರದು. ಈ ವಿಶೇಷ ಪ್ರಯತ್ನದಲ್ಲಿ ಭರಣರಿಗೆ ಬೆಂಬಲವಾಗಿ ನಿಂತಿರುವುದು ಉದ್ಯಮಿ ಹರಿ ಖೋಡೆ.

ಈ ಮೊದಲು ಅಲ್ಲಮ–ಬಸವಣ್ಣರ ಕುರಿತು 'ಯುಗೇ ಯುಗೇ' ಸಿನಿಮಾ ರೂಪಿಸುವ ಭರಣರ ಕನಸು ಈಡೇರಿರಲಿಲ್ಲ. ಆ ಕನಸು ಕೊಂಚ ಬದಲಾಗಿ, 'ಅಲ್ಲಮ'ನಾಗಿ ಈಗ ಮೂರ್ತರೂಪಕ್ಕೆ ಬಂದಿದೆ. 'ಒಂದು ಸಿನಿಮಾ ಮಾಡೋಣ' ಎಂದು ಮಾತಿಗೆ ಕೂತ ಖೋಡೆ ಅವರು ಕೂಡ 'ಅಲ್ಲಮನ ಸಿನಿಮಾ ಯಾಕಾಗಬಾರದು?' ಎಂದರಂತೆ. ಹೀಗೆ ಕಾಕತಾಳೀಯ ಎನ್ನುವಂತೆ ನಿರ್ಮಾಪಕ – ನಿರ್ದೇಶಕರ ಅಭಿರುಚಿ ಒಂದೇ ಆಗಿ, 'ಅಲ್ಲಮ'ನಾಗಿ ಪಲ್ಲವಿಸಿದೆ.

ಭರಣರು ಕಲೆಹಾಕಿರುವ 'ಅಲ್ಲಮ' ಬಳಗವೂ ಸೊಗಸಾಗಿದೆ. ಹಿರಿಯ ಛಾಯಾಗ್ರಾಹಕ ಜಿ.ಎಸ್. ಭಾಸ್ಕರ್ ಹಾಗೂ ಕಲಾ ನಿರ್ದೇಶಕ ಶಶಿಧರ ಅಡಪ ಇಬ್ಬರೂ ಹನ್ನೆರಡನೇ ಶತಮಾನವನ್ನು ಪುನರ್ ರೂಪಿಸುವ ಸವಾಲಿಗೆ ಎದುರಾಗಿದ್ದಾರೆ. ಇವರ ಜೊತೆಗೆ ಬಾಪು ಪದ್ಮನಾಭ ಅವರು ನಾದದ ಗುಂಗು ಸೃಷ್ಟಿಸುತ್ತಿದ್ದಾರೆ. ಕೊಳಲು ಮಾಂತ್ರಿಕ ಹರಿಪ್ರಸಾದ್ ಚೌರಾಸಿಯಾ ಗರಡಿಯಲ್ಲಿ ಪಳಗಿರುವ ಬಾಪು, ಅಲ್ಲಮನ ವಚನಗಳನ್ನು ಭಿನ್ನವಾಗಿ ಪ್ರಸ್ತುತಪಡಿಸುತ್ತಿದ್ದಾರಂತೆ. ಅಂದಹಾಗೆ, ಒಟ್ಟು ಮೂವತ್ತೈದು ವಚನಗಳನ್ನು ಚಿತ್ರದಲ್ಲಿ ಬಳಸಿಕೊಳ್ಳಲಾಗುತ್ತಿದೆ.

ಚಿತ್ರಕಥೆ ರಚಿಸುವಲ್ಲಿ ನಾಗಾಭರಣ ಅವರಿಗೆ ಲೇಖಕ ಸಿದ್ಧಗಂಗಯ್ಯ ಕಂಬಾಳು ಸಂಶೋಧನಾ ಸಾಮಗ್ರಿ ವಹಿಸಿದ್ದಾರೆ. ಹಿರಿಯ ವಿದ್ವಾಂಸರಾದ ಜಿ.ಎಸ್. ಸಿದ್ಧಲಿಂಗಯ್ಯ, ಚಿದಾನಂದಮೂರ್ತಿ ಅವರೊಂದಿಗೆ ಕೂಡ ಭರಣ ಚರ್ಚಿಸಿದ್ದಾರೆ. ಅಲ್ಲಮನ ಚಾರಿತ್ರಿಕ ಪಾತ್ರದಲ್ಲಿ ನಟಿಸುವ ಅವಕಾಶ ಧನಂಜಯ್ ಅವರದು. ಗುರುಪ್ರಸಾದ್ ನಿರ್ದೇಶನದ 'ಡೈರೆಕ್ಟರ್ಸ್ ಸ್ಪೆಷಲ್' ಚಿತ್ರದಲ್ಲಿ ನಟಿಸಿರುವ ಧನಂಜಯ್ ಅವರಿಗೆ ಅಲ್ಲಮನ ಮೂಲಕ ಬಹುದೊಡ್ಡ ಸವಾಲೊಂದು ಎದುರಾಗಿದೆ. ಅಲ್ಲಮನ ಬದುಕಿನ ಒಂದು ಪ್ರಮುಖ ಅಧ್ಯಾಯವಾದ ಮಾಯೆಯ ಪಾತ್ರದಲ್ಲಿ ಮೇಘನಾ ರಾಜ್ ನಟಿಸುತ್ತಿದ್ದಾರೆ. ನಾಗಾಭರಣರ ಮಹತ್ವಾಕಾಂಕ್ಷೆಯ ಚಿತ್ರದ ಭಾಗವಾಗಿರುವುದು ಮೇಘನಾ ಅವರಿಗೆ ಖುಷಿ ತಂದಿದೆ.

ಕನ್ನಡ ಚಿತ್ರರಂಗದಲ್ಲೀಗ ರೀಮೇಕ್‌ಗಳ ಭರಾಟೆ ಚಾಲ್ತಿಯಲ್ಲಿದೆ. ಈಗೇನಿದ್ದರೂ ಕಡತಂದ 'ಮಾಣಿಕ್ಯ', 'ಪವರ್', 'ಬೃಂದಾವನ'ಗಳದ್ದೇ ಕಲರವ. ಇಂಥ ಕಲಸುಮೇಲೋಗರದ ಸಂದರ್ಭದಲ್ಲಿ ಕನ್ನಡ ನಾಡು–ನುಡಿಯ ಅಸ್ಮಿತೆಯೊಂದಿಗೆ ಕನ್ನಡ ಸಿನಿಮಾ ಹೊಂದಿರಬಹುದಾದ ಕ್ಷೀಣ ಕೊಂಡಿಯಂತೆ ನಾಗಾಭರಣ ರೀತಿಯ ನಿರ್ದೇಶಕರು ಕಾಣಿಸುತ್ತಾರೆ. ಈ ಕಾರಣದಿಂದಲೂ ಅವರ 'ಅಲ್ಲಮ' ಚಿತ್ರದ ಪ್ರಯತ್ನಕ್ಕೆ ವಿಶೇಷ ಪ್ರಯತ್ನವಿದೆ.

■ ರಘು